ದಿನಾಂಕ 31-07-2026 ರಂದು ಸಾಕ್ಷಿಯನ್ನು ಪುನಃ ಕರೆಯಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್.ಹೆಚ್.ಕೆ. ವಕೀಲರಿಂದ -**

1) ಚಾಸಾ-11 ನನ್ನ ಸಹಾಯಕ ಸಿಬ್ಬಂದಿ, ಚಾಸಾ-14 ನನ್ನ ಮೇಲಾಧಿಕಾರಿಗಳು. ನನಗೆ ನನ್ನದೇ ಆದ ಕಚೇರಿ ಇದೆ. ನನ್ನ ಕಚೇರಿಯಲ್ಲಿ ಹಾಜರಾತಿ ಮತ್ತು ದಿನಚರಿ ಪುಸ್ತಕಗಳು ಇವೆ ಎಂದರೆ, ದಿನಚರಿ ಪುಸ್ತಕ ಇವೆ, ಹಾಜರಾತಿ ಪುಸ್ತಕ ಇಲ್ಲ. ನಮ್ಮ ಕಚೇರಿಯಲ್ಲಿ ನಾನು ಮತ್ತು ನನ್ನ ಗ್ರಾಮ ಸಹಾಯಕ ಇಬ್ಬರೇ ಇದ್ದೇವೆ. ನನ್ನ ದಿನಚರಿ ಪುಸ್ತಕದಲ್ಲಿ ನಾವು ಆದಿನ ಮಾಡಿದ ಕರ್ತವ್ಯದ ಬಗ್ಗೆ ಬರೆಯುತ್ತೇವೆ. ತಾರೀಕು 23-08-2020 ರಂದು ನಾನು ಈ ಪ್ರಕರಣದ ಕೆಲಸಕ್ಕೆ ಸಂಬಂಧಿಸಿದಂತೆ ಹಾಜರಾಗಿದ್ದನ್ನು ನನ್ನ ದಿನಚರಿ ಪುಸ್ತಕದಲ್ಲಿ ನಮೂದಿಸಿಲ್ಲ. ನಾನು ಈ ಪ್ರಕರಣದಲ್ಲಿ ಹೋದ ಕೆಲಸ ನಮ್ಮ ಇಲಾಖೆಗೆ ಸಂಬಂಧಪಟ್ಟ ಕೆಲಸ. ಈ ಗುನ್ನೆಯ ತನಿಖೆಯಲ್ಲಿ ನಾನು ಹೋಗಿರುವುದನ್ನು ದಿನಚರಿಯಲ್ಲಿ ನಮೂದಿಸದೇ ಇರುವುದು ನನ್ನ ತಪ್ಪು ತಿಳುವಳಿಕೆಯಿಂದ ಆಗಿರುವುದು.

2) ಆದಿನ ನಾವು ಬೆಳಿಗ್ಗೆ 7.30 ರಿಂದ ಮಧ್ಯಾಹ್ನದ 12.45 ರವರೆಗೆ ಈ ಪ್ರಕರಣದ ತನಿಖೆಯಲ್ಲಿ ತೊಡಗಿದ್ದೆವು. ಆದಿನ 12.45 ರ ನಂತರ ನನ್ನ ಕರ್ತವ್ಯಕ್ಕೆ ಹಾಜರಾಗಿದ್ದೆ. ಆದಿನ ನಾನು ಈ ತನಿಖೆಯಲ್ಲಿ ಪಂಚನಾಗಿ ಹೋಗಿಲ್ಲದೇ ಇದ್ದುದರಿಂದ ನನ್ನ ದಿನಚರಿಯಲ್ಲಿ ಅದನ್ನು ನಮೂದಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ತಾರೀಕು 23-08-2020 ರಂದು ಮಧ್ಯಾಹ್ನ 12.45 ರ ನಂತರ ನನ್ನ ಕರ್ತವ್ಯಕ್ಕೆ ಹಾಜರಾಗಿರುವುದನ್ನು ಹಾಗೆಯೇ ದಿನಚರಿಯಲ್ಲಿ ದಾಖಲಿಸಿದ್ದೇನೆ.

3) ನನಗೆ ಆದಿನ ಚಾಸಾ-1 ಫೋನ್ ಮೂಲಕ ಬರಲು ಹೇಳಿದ್ದರು. ಚಾಸಾ-1 ನನಗೆ ಲಿಖಿತ ನೋಟಿಸು ನೀಡಿಲ್ಲ. ಚಾಸಾ-1, ನನ್ನ ಮೇಲಾಧಿಕಾರಿಯವರಿಗೆ ಸರಕಾರಿ ಪಂಚರು ಬೇಕು ಎಂದು ಸೂಚನೆ ನೀಡಿರಬಹುದು. ಆದಿನ ಚಾಸಾ-14 ಇವರು ನನಗೆ ಪಂಚರಾಗಿ ಹೋಗಲು ಮೌಖಿಕವಾಗಿ ಸೂಚಿಸಿದ್ದರು, ಲಿಖಿತವಾಗಿ ಹೇಳಿಲ್ಲ. ಚಾಸಾ-1, ಚಾಸಾ-14 ಇವರಿಗೆ ನಮ್ಮನ್ನು ಸಾಕ್ಷಿದಾರರಾಗಿ ಬರಲು ಯಾವುದೇ ಸೂಚನೆ ಅಥವಾ

ಕೋರಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-14 ಇವರ ಸೂಚನೆಯ ಮೇರೆಗೆ ಹೋಗಿದ್ದೆ. ನಾನು ಚಾಸಾ-1 ಇವರು ದಾಖಲಿಸಿದ ದೂರು ಮತ್ತು ತನಿಖೆಯ ವಿವರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ಆದಿನ ನಾನು ಠಾಣೆಗೆ ಬಸ್ಸಿನಲ್ಲಿ ಹೋಗಿದ್ದೆ. ಆದಿನ ಚಾಸಾ-11 ಮತ್ತು ನಾನು ಇಬ್ಬರು ಶಾಸ್ತ್ರಿ ಸರ್ಕಲ್ ನಿಂದ ಒಟ್ಟಿಗೆ ಹೋಗಿದ್ದೆವು. ಆದಿನ ನಾವು ಠಾಣೆಗೆ ಹೋದಾಗ ಬೆಳಗ್ಗಿನ ಸುಮಾರು 7.50ರ ಸಮಯ. ಅಲ್ಲಿ ನಮಗೆ ಬೇರೆ ಬೇರೆಯಾಗಿ ನೋಟಿಸು ಕೊಟ್ಟಿದ್ದರು. ಆದಿನ ನಾವು ನೋಟಿಸಿಗೆ ಸಹಿ ಮಾಡಿದ್ದೆವು. ನಾವು ಪಂಚರಾಗುತ್ತೇವೆ ಎಂದು ಲಿಖಿತವಾಗಿ ಬರೆದುಕೊಟ್ಟಿಲ್ಲ. ಆದಿನ ಠಾಣೆಯಲ್ಲಿ ನಾವು, ಇನ್ಸಪೆಕ್ಟರ್ ಇದ್ದದ್ದು ಗೊತ್ತು, ಬೇರೆ ಯಾವ ಸಿಬ್ಬಂದಿಗಳು ಇದ್ದರು ಎಂದು ಗೊತ್ತಿಲ್ಲ. ಆದಿನ ನಾವು ಎರಡು ಇಲಾಖಾ ವಾಹನಗಳಲ್ಲಿ ಹೊರಟ್ಟಿದ್ದೆವು. ಆದಿನ ಆ ಜಾಗೆಗೆ ಹೊರಡುವ ಮೊದಲು ನಮ್ಮನ್ನು ನಾವು ತಪಾಸು ಮಾಡಿಕೊಂಡಿಲ್ಲ. ವಾಹನವನ್ನು ತಪಾಸು ಮಾಡಿದ್ದು ಗೊತ್ತಿಲ್ಲ. ಆದಿನ ಠಾಣೆಯಿಂದ ಹೊರಡುವ ಸಮಯದಲ್ಲಿ ಯಾವ ಪರಿಕರಗಳನ್ನು ತೆಗೆದುಕೊಂಡು ಹೋಗಿದೆ ಎಂದು ಗೊತ್ತಿಲ್ಲ. ಆದಿನ ನಾವು ಹೋಗಿದ್ದ ಎರಡು ವಾಹನಗಳಲ್ಲಿ ಯಾರು, ಯಾರು, ಯಾವ ವಾಹನದಲ್ಲಿ ಇದ್ದರು ಎಂದು ನಾನು ಗಮನಿಸಿಲ್ಲ. ಆದಿನ ನಾವು ಹೋಗಿದ್ದ ವಾಹನದ ಸರಕಾರಿ ಜೀಪ್, ಅದರ ನಂಬ್ರ ಏನು ಎಂದು ನೋಡಿಕೊಂಡಿಲ್ಲ.

5) ಆದಿನ ನಾವು ಹೋಗಿದ್ದ ಜಾಗೆ, ಠಾಣೆಯಿಂದ ಸುಮಾರು 7 ಕಿ.ಮೀಗಳ ಅಂತರ. ಅದು ನಮ್ಮ ತಹಶೀಲ್ದಾರ್ ಕಚೇರಿಯಿಂದ ಸುಮಾರು 7 ಕಿ.ಮೀಗಳ ಅಂತರ. ಆದಿನ ನಾವು ಹೋಗಿದ್ದ ಜಾಗೆ ಜನವಸತಿ, ಫ್ಯಾಕ್ಟರಿ, ಮನೆ, ಮಸೀದಿಗಳು ಇರುವ ಜಾಗೆ ಎಂದರೆ ಸರಿಯಲ್ಲ. ಆದಿನ, ನಾವು ಹೋಗಿದ್ದ ಜಾಗೆಯಲ್ಲಿ ಸಾರ್ವಜನಿಕರ ಸಂಚಾರ ಇತ್ತು ಎಂದರೆ ಸರಿಯಲ್ಲ. ಆದಿನ, ಪೊಲೀಸರು ನಮ್ಮ ಸಮಕ್ಷಮ ಅಲ್ಲಿ ಯಾರಾನ್ನೂ ಗಾಂಜಾದ ಮಾರಾಟಕ್ಕೆ ಸಂಬಂಧಪಟ್ಟಂತೆ ವಿಚಾರಿಸಿಲ್ಲ. ನಾವು ಅಲ್ಲಿಗೆ ಹೋಗುವ ಮೊದಲು ಆ ಜಾಗೆಯಲ್ಲಿ ಪೊಲೀಸರು ಮೊದಲು ಇರಲಿಲ್ಲ.

6) ಆದಿನ, ನಮ್ಮ ವಾಹನವನ್ನು ಆರೋಪಿತರು ಇದ್ದ ಜಾಗೆಯಿಂದ ಸುಮಾರು 100 ಮೀಟರ್ ಗಳ ಅಂತರದಲ್ಲಿ ನಿಲ್ಲಿಸಿದ್ದೆವು. ಆದಿನ ನಾನು ಇದ್ದ ವಾಹನ ಮುಂದೆ ಇತ್ತು, ಹಿಂದೆ ಇನ್ನೊಂದು ವಾಹನ ಇತ್ತು. ಆದಿನ ಆರೋಪಿತರ ಜಾಗೆಗೆ ಪೊಲೀಸರು ಮೊದಲು ಹೋಗಿದ್ದರು. ನಾನು ಸಹ ಪೊಲೀಸರೊಂದಿಗೆ ಇದ್ದೆ. ಪೊಲೀಸರು ಮತ್ತು ಆರೋಪಿತರು ಗ್ರೌಂಡ್ ನ ಕಡೆಗೆ ಓಡಿದ್ದರು. ಆದಿನ ಆರೋಪಿತರನ್ನು ಹಿಡಿಯಲು ಎಷ್ಟು ಜನ ಪೊಲೀಸರು ಹೋಗಿ ಹಿಡಿದು ತಂದಿದ್ದರು ಎಂದು ಈಗ ನೆನಪಿಲ್ಲ.

7) ಆದಿನ ಜಪ್ತು ಮಾಡಿದ ವಸ್ತುವನ್ನು ಪ್ಲಾಸ್ಟಿಕ್ ತೊಟ್ಟೆಯಲ್ಲಿ ಹಿಡಿದುಕೊಂಡಿದ್ದರು. ನಾನು ಅವರನ್ನು ಆ ಸಮಯದಲ್ಲಿ ವಿಚಾರ ಮಾಡಿಲ್ಲ. ಆಗ ಪೊಲೀಸರು ವಿಚಾರ ಮಾಡಿದ್ದರು, ನಂತರ ತಹಶೀಲ್ದಾರ್ ವಿಚಾರಣೆ ಮಾಡಿದ್ದರು. ಪೊಲೀಸರು ವಿಚಾರ ಮಾಡುವಾಗ ಸುಮಾರು 8.20ರ ಸಮಯ. ಆರೋಪಿತರನ್ನು ಹಿಡಿದಾಗ ಅಲ್ಲಿ ದಾಖಲೆಯನ್ನು ಮಾಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-14 ಇವರಿಗೆ ನಾವು ಹೋಗುತ್ತಿದ್ದ ವಿಷಯದ ಬಗ್ಗೆ ತಿಳಿಸಿದ್ದೆವು. ಚಾಸಾ-14 ಇವರನ್ನು ಕರೆತರಬೇಕೆಂದು ಇಲಾಖಾ ವಾಹನದೊಂದಿಗೆ ಪೊಲೀಸರನ್ನು ಸಹ ಕಳುಹಿಸಿದ್ದರು. ಆ ವಾಹನದಲ್ಲಿಯೇ ಚಾಸಾ-14 ಅಲ್ಲಿ ಬಂದಿದ್ದರು ಎಂದರೆ ನಿಜ.

8) ಚಾಸಾ-14 ಬರುವ ಸಮಯದಲ್ಲಿ ಜಪ್ತಾದ ಮುದ್ದೆಮಾಲುಗಳು ಜೀಪ್ ನ ಮೇಲೆ ಇತ್ತಾ, ನೆಲದ ಮೇಲೆ ಇತ್ತಾ ಎಂದರೆ, ಅವು ಆರೋಪಿತರ ಕೈಯಲ್ಲಿ ಇದ್ದವು. ಚಾಸಾ-14 ಬರುವವರೆಗೆ ಸುಮಾರು ಒಂದುವರೆ ಗಂಟೆ ವೇಳೆ ಹಿಡಿದಿತ್ತು, ಅಲ್ಲಿಯವರೆಗೆ ನಾವು ಅಲ್ಲಿಯೇ ಇದ್ದೆವು. ಆದಿನ ಜಪ್ತಾದ ತೊಟ್ಟೆ ಅದು ಒಂದು ಪ್ಲಾಸ್ಟಿಕ್ ತೊಟ್ಟೆ, ಅದು ಬಿಳಿ ಬಣ್ಣದ್ದು ಇತ್ತು. ಆದಿನ ತೊಟ್ಟೆಯ ಒಳಗೆ ಇದ್ದ ವಸ್ತುವನ್ನು ಹೊರ ತೆಗೆದು ತೂಕ ಮಾಡಿದ್ದರು. ತೊಟ್ಟೆಯನ್ನು ತೂಕ ಮಾಡಿಲ್ಲ. ಆದಿನ ತೂಕ ಮಾಡಿದ್ದು ಗಾಂಜಾ ಎಂದು ತಿಳಿದಿತ್ತು. ಅದು ಪುಡಿಯಾಗಿತ್ತು.

9) ಆದಿನ ಜಪ್ತಾದ ಹಣ ಮತ್ತು ಮೊಬೈಲ್ ಆರೋಪಿತರ ಪ್ಯಾಂಟಿನ ಯಾವ ಜೇಬಿನಲ್ಲಿ ಇತ್ತು ಎಂದು ಈಗ ನೆನಪಿಲ್ಲ. ಆದಿನ ಜಪ್ತಾದ ಹಣದಲ್ಲಿ ಎಷ್ಟು, ಯಾವ

ಮೌಲ್ಯದ ನೋಟುಗಳು ಎಂದರೆ, 500 ರೂಪಾಯಿ ಎರಡು ನೋಟು, 100 ರೂಪಾಯಿ ಎರಡು ನೋಟು, 20 ರೂಪಾಯಿ 4 ನೋಟು, 10 ರೂಪಾಯಿಯ ಒಂದು ನೋಟು, ಅದು 1 ನೇ ಆರೋಪಿಯ ಬಳಿ ಸಿಕ್ಕಿತ್ತು. ಆ ನೋಟುಗಳ ಕ್ರಮ ಸಂಖ್ಯೆ ಗೊತ್ತಿಲ್ಲ. 2 ನೇ ಆರೋಪಿಯು ಬಳಿ ಕೂಡಾ 590 ರೂಪಾಯಿ ಹಣ ಸಿಕ್ಕಿತ್ತು, ಅವುಗಳಲ್ಲಿ 500 ರೂಪಾಯಿ ಒಂದು ನೋಟು, 20 ರೂಪಾಯಿ 4 ನೋಟು, 10 ರೂಪಾಯಿಯ ಒಂದು ನೋಟು. ಅವುಗಳ ಕ್ರಮ ಸಂಖ್ಯೆ ಗೊತ್ತಿಲ್ಲ. ಆದಿನ ಜಪ್ತಾದ ಮೋಟಾರ್ ಸೈಕಲ್ ಯಮಹಾ ಆರ್ ಎಕ್ಸ 135.

10) ನನಗೆ ಈಗ ತೋರಿಸಿದ ನಿಪಿ-8 ರ ಪೋಟೋದಲ್ಲಿ ಆರೋಪಿತರಿಂದ ಜಪ್ತಾಗಿತ್ತು ಎಂಬ ಹಣವಾಗಲೀ, ಮೊಬೈಲ್ ಆಗಲೀ, ನಾನು ಹೇಳಿದ ಮೋಟಾರ್ ಸೈಕಲ್ ಆಗಲೀ ಕಾಣುತ್ತಿಲ್ಲ ಎಂದರೆ, ಬೈಕ್ ಸಂಪೂರ್ಣ ಕಾಣಿಸುತ್ತಿಲ್ಲ, ಟಯರ್ ಮಾತ್ರ ಕಾಣಿಸುತ್ತಿದೆ. ಮೊಬೈಲ್ ಮತ್ತು ಹಣ ಕಾಣುತ್ತಿಲ್ಲ. ನಿಪಿ-8 ರಲ್ಲಿ ಬಿಳಿ ಪ್ಲಾಸ್ಟಿಕ್ ತೊಟ್ಟೆ ಇಲ್ಲ ಎಂದರೆ, ಅದು ಸ್ವಲ್ಪ ಮಟ್ಟಿಗೆ ಹಳದಿ ಮತ್ತು ನೀಲಿಬಣ್ಣ ಇದ್ದು, ಅದರಲ್ಲಿ ಕೆಂಪು ಅಕ್ಷರದಿಂದ ಬರೆದಿದೆ. ನಾನು ಹೇಳಿದಂತಹ ಬಿಳಿ ತೊಟ್ಟೆ ಅಲ್ಲಿ ಕಾಣುತ್ತಿಲ್ಲ ಎಂದರೆ ನಿಜ. ನಿಪಿ-8 ರ ಪೋಟೋ ನಾನು ಹೇಳಿದ ತನಿಖೆಯ ಸಮಯದಲ್ಲಿ ತೆಗೆದ ಪೋಟೋ ಅಲ್ಲ ಎಂದರೆ ಸರಿಯಲ್ಲ. ನಿಪಿ-8 ರ ಪೋಟೋವನ್ನು ನಾನು, ಚಾಸಾ-11 ಮತ್ತು 14 ಇವರೊಂದಿಗೆ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

11) ಆದಿನ ನಾನು, ಚಾಸಾ-11 ಮತ್ತು 14 ಠಾಣೆಗೆ ಹೋಗಿದ್ದೆವು. ಆಗ ಸಮಯ ಸುಮಾರು 12.45 ಗಿಂತ ಹೆಚ್ಚಾಗಿತ್ತು. ಪೊಲೀಸರು ಠಾಣೆಗೆ ಹೋದಾಗ ಅಲ್ಲಿ ಯಾವುದೇ ದಾಖಲೆಗಳನ್ನು ಮಾಡಿಲ್ಲ. ಪೊಲೀಸರು ನಿಪಿ-7 ನ್ನು ಠಾಣೆಯಲ್ಲಿಯೇ ಬರೆದು, ಸಿದ್ಧಪಡಿಸಿ , ಅಲ್ಲಿಯೇ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರು ಆದಿನ ಠಾಣೆಯಲ್ಲಿ ನಮ್ಮ ಹೇಳಿಕೆ ಪಡೆದಿಲ್ಲ. ಆದಿನ ನಾವು ಪುನಃ ನಿಪಿ-7 ರ ಜಾಗೆಗೆ ಆಗಲೀ, ಠಾಣೆಗಾಗಲೀ ಹೋಗಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಆದಿನ ಚಾಸಾ-1, ನಮಗೆ ಠಾಣೆಗೆ ಬರಲು ಹೇಳಿಲ್ಲ ಎಂದರೆ ಸರಿಯಲ್ಲ. ಅದರಂತೆ ನಾನು ಮತ್ತು ಚಾಸಾ-11 ಠಾಣೆಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಚಾಸಾ-1 ನಮ್ಮನ್ನು ನಿಪಿ-7ರ ಜಾಗೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಸಿಬ್ಬಂದಿಗಳು ಆರೋಪಿಗಳನ್ನು ಹಿಡಿದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನಿಪಿ-7ರ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಎಂಒ-1 ರಿಂದ 3ರ ಮುದ್ದೆಮಾಲುಗಳಿಗೂ, ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಆರೋಪಿತರಿಂದ ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ಇವರೊಂದಿಗೆ ಸೇರಿ ನಿಪಿ-7, 8ರ ದಾಖಲೆಗಳಿಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿತರ ಪರವಾಗಿ ಶ್ರೀ ಇ.ಬಿ.ಆರ್ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದಾರೆ.**

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ. ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.